**ಬಂಗಾಳಿ ಮೂಲ: ಸೆಲಿನಾ ಹುಸೈನ್**
**ಕನ್ನಡಕ್ಕೆ: ನಾಗಮಣಿ ಎಸ್.ಎನ್.,**
**ಸರಸಿಜ್ ಆರ್.ಸಿ.**

ಕಲೆ: ರೂಪಶ್ರೀ ಕಲ್ಲಿಗನೂರ್

# ಮೊತಿಜಾನಳ ಮಕ್ಕಳು

ಮದುವೆ ಹೆಣ್ಣುಮಕ್ಕಳಿಗೆ ಒಂದು ಮಹತ್ತ್ವದ ಸ್ಥಾನ ತರುತ್ತದೆ. ಹೆಣ್ಣು ಮನೆಯೊಂದರ ಸೊಸೆಯಾಗುತ್ತಾಳೆ, ವ್ಯಕ್ತಿಯೊಬ್ಬನ ಹೆಂಡತಿಯಾಗುತ್ತಾಳೆ.

ಹೆಂಡತಿಯಾಗುವುದೆಂದರೆ ಒಂದು ಹೊಸ ಜನ್ಮ ಪಡೆದಂತೆ. ಸುಖದುಃಖದೊಂದಿಗೆ ಇನ್ನೂ ಅನೇಕ ಸಂಗತಿಗಳು ಸೇರಿ ಅವಳದೇ ಒಂದು ಜಗತ್ತು ನಿರ್ಮಾಣವಾಗುತ್ತದೆ. ಸಂಸಾರದ ಜವಾಬ್ದಾರಿ, ಯಜಮಾನಿಕೆ ಹೀಗೆಲ್ಲ. ಈ ರೀತಿಯ ಒಂದು ಭಾವನೆ ಮೊತಿಜಾನಳಿಗೆ ಇತ್ತು. ಮದುವೆಯಾಗಿ ಅನೇಕ ತಿಂಗಳುಗಳೇ ಉರುಳಿವೆ, ಅವಳಿಗಿನ್ನೂ ಈ ಸಂಸಾರದಲ್ಲಿ ತನ್ನ ಸ್ಥಾನವೇನು ಎಂಬುದು ಅರ್ಥವಾಗಿಲ್ಲ. ತಲೆಮೇಲೆ ಅತ್ತೆ, ಅವಳದೇ ಸಂಸಾರ. ಈ ಭಾವನೆ ಅವಳ ಎದೆ ತುಂಬಿ ಭಾರವಾಗಿದೆ. ಅತ್ತೆಯ ಭರ್ತ್ಸನೆಯ ಮಾತುಗಳು ಎದೆಯನ್ನು ಸುಟ್ಟು ಬೂದಿ ಮಾಡುತ್ತವೆ. ಆಗ ಅವಳಿಗೆ ಸಂಸಾರದ ವ್ಯಾಮೋಹ ಹಾರಿಹೋಗುತ್ತದೆ. ಅವಳು ವಿಧವೆಯಾಗಲು ಬಯಸುತ್ತಾಳೆ.

ಮೊತಿಜಾನಳ ಅತ್ತೆ ಗುಲ್ನೂರ್, ಅವಳ ಮಗ ಅಬೂಲ್ ಹುಟ್ಟಿದ ಒಂದೂವರೆ ವರ್ಷದೊಳಗೆ ವಿಧವೆಯಾಗಿದ್ದಳು. ಆಮೇಲೆ ಇಪ್ಪತ್ತೆರಡು ವರ್ಷಗಳು ಕಳೆದಿವೆ. ಗಂಡನ ಆಸ್ತಿಪಾಸ್ತಿ ಏನೇನಿತ್ತೋ ಅದನ್ನ ನೋಡ್ಕೊಂಡು ಗಟ್ಟಿಯಾಗಿ ನಿಂತು ಸಂಸಾರವನ್ನ ನೇರ್ಪಾಗಿಟ್ಟುಕೊಂಡವಳೆ ಗುಲ್ನೂರ್. ಮಗನನ್ನ ಬೆಳೆಸಿ ದೊಡ್ಡವನನ್ನಾಗಿ ಮಾಡಿದಾಳೆ. ಗಂಡನ ಮನೆಯವರ ಅಥವಾ ಅಪ್ಪನ ಮನೆಯವರ ಮುಂದೆ ಸಹಾಯಕ್ಕಾಗಿ ಕೈಚಾಚಿದವಳಲ್ಲ. ಹಳ್ಳೀ ಜನ ಹೇಳ್ತಾರೆ, 'ಗುಲ್ನೂರ್ ಭಾರೀ ಗಟ್ಟಿ ಹೆಣ್ಣು ಮಗಳು'.

ಈ ಅಭಿಮಾನ ಅವಳಿಗಿದೆ. ಯಾವುದಕ್ಕೂ ಹೆದರದೆ ನಿಂತದ್ದಕ್ಕೆ ಅವಳಿಗೆ ತನ್ನ ಬಗ್ಗೆ ತುಂಬಾ ಗರ್ವ. ಹೀಗೆ ಗಟ್ಟಿಯಾಗಿ ನಿಂತದ್ದರ ಮಹತ್ತ್ವ ಅವಳಿಗೆ ಬಹಳ ದೊಡ್ಡದು. ಅವಳು ಏನು ಹೇಳ್ತಾಳೋ ಅದು ನಡಿಯಲೇಬೇಕು. ಅವಳು ಹೇಳುವುದೇ ಸರಿ, ಅವಳ ಆಣತಿಯಿಲ್ಲದೆ ಏನೂ

